## ಬಹು ಉಪಯೋಗಿ ಮನೆಮದ್ದು

ಸ್ಟಾರ್ ಸುವರ್ಣದಲ್ಲಿ ಮಧ್ಯಾಹ್ನ 1.00 ಗಂಟೆಗೆ ಪ್ರಸಾರವಾಗುತ್ತಿರುವ ಪಾಕಶಾಲೆ ಕಾರ್ಯಕ್ರಮದಲ್ಲಿ ಪಾಕ ಪ್ರವೀಣೆ ಗೌರಿಯಮ್ಮ ತುಂಬಾ ಸರಳವಾದ ಮತ್ತು ಅಡುಗೆ ಮನೆಯ ಪದಾರ್ಥಗಳನ್ನೆ ಉಪಯೋಗಿಸಿ ತಯಾರಿಸಬಹುದಾದ ಮನೆಮದ್ದುಗಳನ್ನು ವೀಕ್ಷಕರಿಗೆ ತಿಳಿಸುತ್ತಿರುವುದು ಶ್ಲಾಘನೀಯವಾಗಿದೆ. ಕೆಲವು ಔಷಧಿಗಳನ್ನು ಪ್ರಯೋಗ ಮಾಡಿ ನೋಡಿದ್ದೇನೆ, ಪರಿಣಾಮಕಾರಿಯಾಗಿದೆ.

- ಸುಭದ್ರ, ನೇಗಿಲೋಣಿ ಬೆಂಗಳೂರು

## ನಿಂತ ನೀರು

ಮನೆದೇವರು ಧಾರಾವಾಹಿ ನಿಂತ ನೀರಾಗಿದೆ. ಎಲ್ಲವನ್ನೂ ಸರಿಮಾಡಲು ಬಂದ ಜಾನಕಿ ಪ್ರತಿನಿತ್ಯ ಅವಹೇಳನಕ್ಕೆ ಗುರಿಯಾಗಿ ಅವಳೇ ಗೋಳಾಡುತ್ತಿದ್ದಾಳೆ. ಇನ್ನು ಸರಿ ಮಾಡುವುದು ಎಲ್ಲಿಂದ ಬಂತು. ಅವಳ ಗಂಡನೆಂಬ ಪ್ರಾಣಿ ರೂಮಿನೊಳಗೆ ಕುಳಿತು ಒರಲುವುದೇ ಆಯಿತು. ತಂತ್ರ 'ಕುತಂತ್ರ' ಪ್ರತಿತಂತ್ರಗಳು ಸಾಕು. ಕಥೆ ಮುಂದೆ ಸಾಗಲಿ. ಜಾನಕಿಯ ಅತ್ತೆಯ ಆಸೆಯಂತೆ ಮನೆಯವರನ್ನೆಲ್ಲ ಒಗ್ಗೂಡಿಸಲಿ. ಜಯರಾಮನ ಕಣ್ಣು ತೆರೆಸಲಿ.

—ಪ್ರಭಾವತಿ ಕಾಳಪ್ಪ

## ಗಂಟುಗಳ್ಳರು ಸಂತೆ ಸೇರಿದಂತೆ!

ಕಲರ್ಸ್ ಕನ್ನಡದ 'ಕುಲವಧು'ವಿನಲ್ಲಿ ಒಂದು ಕುಟುಂಬವನ್ನು ಒಡೆಯಲು ಕಾಂಚನಾ, ನಿಖಿಲ್ ಪಾತ್ರಗಳು ಈ ತನಕ ಯತ್ನಿಸುತ್ತಿದ್ದವು. ಇಷ್ಟು ಸಾಲದೆಂಬಂತೆ ಇದೀಗ ನಂದಿನಿ ಎಂಬ ಪಾತ್ರವೂ ಜೊತೆಗೂಡಿದೆ. ಈ ಧಾರಾವಾಹಿಯನ್ನು ನೋಡುತ್ತಿದ್ದರೆ, 'ಗಂಟುಗಳ್ಳರು ಸಂತೆ ಸೇರಿದಂತೆ' ಎಂಬ ಗಾದೆ ನೆನಪಾಗುತ್ತದೆ.

ಇಂದು ನಮ್ಮ ವಾಹಿನಿಗಳು ಸ್ತ್ರೀಯರನ್ನು ಖಳನಾಯಕಿಯರನ್ನಾಗಿ ಬಿಂಬಿಸುತ್ತಿವೆ. 'ಗೃಹಿಣೀ ಗೃಹಮುಚ್ಯತೇ' ಎಂಬ ಉನ್ನತ ಗುಣಮಟ್ಟದ ಘೋಷವಾಕ್ಯವು ಮರೆಯಾಗಿ, 'ಗೃಹಿಣೀ ಗೃಹ ಛಿದ್ರತೇ' ಎನ್ನುವಂತಾಗಿದೆ. ನಮ್ಮದಲ್ಲದ ಈ ಸಂಸ್ಕೃತಿಯನ್ನು ಪ್ರಸಾ(ಚಾ)ರ ಮಾಡುವ ನಮ್ಮ ವಾಹಿನಿಗಳು ಇನ್ನು ಮುಂದಾದರೂ ಸರಿಯಾದ ದಾರಿಯಲ್ಲಿ ನಡೆಯುತ್ತವೆಯೆ?

-ಉಡುಪಿ ಅನಂತೇಶ ರಾವ್, ಬೆಂಗಳೂರು.

ವಾರದ ಪತ್ರ

## ಹೀಗಾದರೆ ಕನ್ನಡದ ಗತಿ

ಝೀ ಕನ್ನಡದ 'ವೀಕೆಂಡ್ ವಿಥ್ ರಮೇಶ್'ನಲ್ಲಿ ಭಾರತಿ ವಿಷ್ಣುವರ್ಧನ್ ಹಾಗೂ ಜಯಂತ ಕಾಯ್ಕಿಣಿಯವರ ಕಾರ್ಯಕ್ರಮಗಳು ಪ್ರಸಾರವಾದವು. ಕನ್ನಡದ ಮೇರುನಟಿ, ಅವರ ಪತಿ ವಿಷ್ಣುವರ್ಧನ್ ಕನ್ನಡ ಚಿತ್ರರಂಗದ ಕಣ್ಮಣಿ. ಆದರೆ ಅವರ ಮೊಮ್ಮಕ್ಕಳಿಗೆ ಕನ್ನಡ ಮಾತನಾಡಲು ಬರುವುದಿಲ್ಲ! ಕನ್ನಡದಲ್ಲಿ ನಟಿಸಿರುವ ಅಜ್ಜಿ–ತಾತರ ಚಿತ್ರಗಳನ್ನು ಅವರು ನೋಡೇ ಇಲ್ಲವೆಂದು ಕಾಣುತ್ತದೆ. ಎಂತಹ ವಿಪರ್ಯಾಸ!

ಮತ್ತೊಬ್ಬರು ಕನ್ನಡದ ಶ್ರೇಷ್ಠಕವಿ. ಅವರು ರಚಿಸಿರುವ ಹಾಡುಗಳು ಕನ್ನಡಿಗರ ಮನೆಮಾತು. ಆದರೆ ಕರ್ನಾಟಕದ ಮಣಿಪಾಲದಲ್ಲಿರುವ ಮಗಳಿಗೆ ಕನ್ನಡ ಮಾತನಾಡಲು ಕಷ್ಟ! ಇನ್ನು ಮಗನ ಬಗ್ಗೆ ಹೇಳುವುದೇ ಬೇಡ. ಇವರನ್ನೆಲ್ಲಾ ಮಾತನಾಡಿಸುವ ಅಗತ್ಯವಿತ್ತೆ? ಕನ್ನಡದ ಖ್ಯಾತ ನಟ ಈ ಇಂಗ್ಲಿಷ್ ಪ್ರೇಮಿಗಳನ್ನು ಮಾತನಾಡಿಸಲು ತಾವು ಆಂಗ್ಲ ಭಾಷೆಯ ಮೊರೆಹೋಗಿದ್ದು ನೋಡಿ ನಗು ಬಂತು. ಕನ್ನಡ ಉಳಿಸಿ–ಬೆಳೆಸಬೇಕಾದ ಮನೆಗಳಲ್ಲೇ ಕನ್ನಡಕ್ಕೆ ಈ ಸ್ಥಿತಿ ಬಂದರೆ ಉಳಿದವರ ಬಗ್ಗೆ ಏನು ಹೇಳಲು ಸಾಧ್ಯ?

—ಸಿ.ಎನ್. ಮುಕ್ತಾ, ಮೈಸೂರು

## ಈಶ್ವರ ಅಲ್ಲಾ ಚಂದದ ಧಾರಾವಾಹಿ

ನಮ್ಮ ಚಂದನ ವಾಹಿನಿಯಲ್ಲಿ ಮರು ಪ್ರಸಾರಗೊಳ್ಳುವ 'ಈಶ್ವರ ಅಲ್ಲಾ...' ಧಾರಾವಾಹಿ ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ಶರೀಫ್ ಸಾಹೇಬರ ಪಾತ್ರಧಾರಿ ಸೈಯ್ಯದ್ ಸಲಾವುದ್ದೀನ್ ಪಾತ್ರದ ಒಳಹೊಕ್ಕು ಅಭಿನಯಿಸಿದ್ದಾರೆ. ಬಹು ಮುಖ್ಯ ಸಂಗತಿ ಏನೆಂದರೆ ಅವರ ಬಾಯಿಂದ ಬರುವ ಕನ್ನಡ ನುಡಿ ಮುತ್ತುಗಳು ಅತ್ಯಂತ ಸ್ಪಷ್ಟ ಅಸ್ಖಲಿತ. ನಮ್ಮ ಕನ್ನಡ ನಟ ಚಕ್ರವರ್ತಿಗಳು ಇವರನ್ನು ನೋಡಿ ಕಲಿಯಬೇಕಾಗಿದೆ.

ನಮ್ಮ ದುರ್ದೈವ ಏನೆಂದರೆ ಇಂಥ ನಟರು ಬರೀ ಇಂಗ್ಲಿಷಿನಲ್ಲಿಯೇ ಮಾತನಾಡುತ್ತಾರೆ.

—ಎಚ್.ಆರ್. ಕೆನಾಳಗಿ, ಸಾಗರ

## ಉತ್ತಮ ಸಲಹೆ

'ಜಾಣರ ಪೆಟ್ಟಿಗೆಯಲ್ಲಿ ದೂಷಿಸುವುದು ಸಲ್ಲ' ಎಂಬ ಅಭಿಪ್ರಾಯ ಮೂಡಿ ಬಂದಿದೆ. ದೂಷಣೆಯಲ್ಲ, ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡುವ ಕಾರ್ಯಕ್ರಮಗಳು ಮೂಡಿ ಬರಲಿ. ಜಗಳ, ತರಲೆ, ಅಸಹ್ಯಕರವಾದ ನಡವಳಿಕೆಯನ್ನು ಸಮಾಜದಲ್ಲಿ ಸುತ್ತುಮುತ್ತಲೂ ನೋಡುತ್ತಿರುತ್ತೇವೆ. ಆದರೆ ಕಿರುತೆರೆಯಲ್ಲಾದರೂ, ಆದರ್ಶ, ನಮ್ಮ ಸಂಸ್ಕಾರವನ್ನು ಬಿಂಬಿಸುವ, ಒಳ್ಳೆಯ ನೀತಿಗಳು ಪ್ರಸಾರವಾದರೆ ಎಲ್ಲರಿಗೂ ಒಳಿತಲ್ಲವೆ? ಮುಂದಿನ ಪೀಳಿಗೆಗೆ ಒಳ್ಳೆಯ ನೀತಿ ನಿಯಮಗಳನ್ನು ಅನುಸರಿಸಬೇಕೆಂಬ ಮಾದರಿ ವ್ಯವಸ್ಥೆಗಳು ಪುನರುತ್ಥಾನವಾಗುವ ರೀತಿಯಲ್ಲಿ ಧಾರಾವಾಹಿಗಳನ್ನು ಬಿಂಬಿಸಿ ಎಂಬ ಕಳಕಳಿಯ ಅಭಿಪ್ರಾಯ ಅಷ್ಟೆ!

—ಲಲಿತಾ ಅಂಬಾಗಿಲು, ಉಪ್ಪುಂದ

## ಥಟ್... ಸುಧಾರಿಸಲಿ

ಚಂದನ ಕನ್ನಡ ವಾಹಿನಿಯಲ್ಲಿ 'ಥಟ್ ಅಂತಾ ಹೇಳಿ' ಪ್ರತಿದಿನ ಪ್ರಸಾರವಾಗುತ್ತಿರುವ ಬಹಳ ಜನಪ್ರಿಯ ಕಾರ್ಯಕ್ರಮ. ಹೊಸ ಪುಸ್ತಕಗಳ ಪರಿಚಯದ ಜೊತೆ ಸರಿ ಉತ್ತರ ಹೇಳಿದ ಪ್ರತಿನಿಧಿಗಳಿಗೆ ಪುಸ್ತಕಗಳನ್ನು ಬಹುಮಾನವಾಗಿ ನೀಡುತ್ತಿರುವುದು ಸಂತೋಷಕರ ಸಂಗತಿ. ಆದರೆ ಸರಿ ಉತ್ತರ ಹೇಳಿದ ಮೊದಲನೆ ಅಥವಾ ಎರಡನೆಯ ಸ್ಪರ್ಧಿಗಳಿಗೆ ಮಾತ್ರ ಬಹುಮಾನ ನೀಡಲಾಗುತ್ತಿದೆ. ಮೊದಲ ಮತ್ತು ಎರಡನೆಯ ಸ್ಪರ್ಧಿಗಳು ಸರಿ ಉತ್ತರ ಹೇಳದಿದ್ದರೆ ಮೂರನೆಯವರಿಗೆ ಅವಕಾಶ ನೀಡಲಾಗುತ್ತಿದೆ. ಅವರು ಸರಿ ಉತ್ತರ ನೀಡಿದ್ದರೂ ಕೂಡ ಬಹುಮಾನ ನೀಡುವುದಿಲ್ಲ. ಅವರಿಗೆ ಬಹುಮಾನ ನೀಡುವುದು ನ್ಯಾಯ ಸಮ್ಮತ ಎನಿಸುತ್ತದೆ. ಮೂರು ಜನ ಸರಿ ಉತ್ತರ ಹೇಳಿದ್ದರೆ ಮೊದಲು ಉತ್ತರ ನೀಡಿದ (ಬಝರ್ ಒತ್ತಿದ) ಸ್ಪರ್ಧಿಗೆ ಬಹುಮಾನ ನೀಡುತ್ತಿರುವುದು ವಾಡಿಕೆಯಲ್ಲಿರುವುದು. ಕಳೆದ ಒಂದು ಸಂಚಿಕೆಯಲ್ಲಿ ಒಬ್ಬ ಸ್ಪರ್ಧಿ 6 ಉತ್ತರಗಳನ್ನು ನೀಡಿದ್ದರೂ ಮೂರು ಪುಸ್ತಕಗಳನ್ನು ಬಹುಮಾನವಾಗಿ ಪಡೆದರು. ಆರು ಉತ್ತರಗಳಲ್ಲಿ ಮೂರು ಸರಿ ಉತ್ತರಗಳನ್ನು ಮೂರನೆಯವರಾಗಿ ನೀಡಿದ್ದರಿಂದ ಅವುಗಳನ್ನು ಬಹುಮಾನಕ್ಕಾಗಿ ಪರಿಗಣಿಸಲಿಲ್ಲ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಹಿರಿಯ ನಟ ರಾಜೇಶ್ ಪರಿಚಯಿಸಿ

ಝೀ ಕನ್ನಡದಲ್ಲಿ ಮೂಡಿ ಬರುತ್ತಿರುವ 'ವೀಕೆಂಡ ವಿಥ್ ರಮೇಶ–3' ಸೊಗಸಾಗಿದೆ. ಖ್ಯಾತ ನಾಮರ ಜೀವನದ ಹಲವಾರು ಸಂಗತಿಗಳು ಅರಿವಾಗುತ್ತವೆ. ಸಾರಥಿ ರಮೇಶ ಅರವಿಂದರ ಅತ್ಯಾಕರ್ಷಕ ನಿರೂಪಣೆ ಅದ್ಭುತ.

ಹಿರಿಯ ನಟ ಡಾ.ರಾಜ್ ತಲೆಮಾರಿನ ಅಂತಿಮ ಕೊಂಡಿಯಂತಿರುವ ಡಾ.ರಾಜೇಶ ಅವರನ್ನ ಕರೆಸಿ ಎಂಬುದು ನನ್ನ ವಿನಂತಿ. 85ರ ಹರೆಯದಲ್ಲಿಯೂ ಉತ್ಸಾಹದ ಚಿಲುಮೆಯಾಗಿದ್ದಾರೆ. ಅವರ ಸಂಘರ್ಷದ ಬದುಕು ಕುತೂಹಲಕರ.

—ವೆಂಕಟೇಶ್ ಮುದಗಲ್ಲು ಕಲಬುರಗಿ